ಪಿ ಡಬ್ಲೂ.1: ಪ್ರಕಾಶ್.ಬಿ.ಜೆ.,

**ದಿನಾಂಕ: 13.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಿಂದ:**

ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ.

| |
|---|
| ಚಾಲನಾ ಪರವಾನಗಿಯ ನೋಟರೀಕೃತ ಪ್ರತಿಯನ್ನು ಹಾಜರುಪಡಿಸುತ್ತಿದ್ದು ಮೂಲ ದಾಖಲೆಯೊಂದಿಗೆ ಪರಿಶೀಲಿಸಿ ನೋಟರಿ ಪ್ರತಿಯನ್ನು **ನಿ.ಪಿ.9** ಎಂದು, (ಮೂಲ ದಾಖಲೆಯನ್ನು ಪರಿಶೀಲಿಸಿ ಸಾಕ್ಷಿಗೆ ಹಿಂತಿರುಗಿಸಲಾಯಿತು.) |
| ಎರಡು ಡಿಸ್ಚಾರ್ಜ್ ಸಮ್ಮರಿಗಳನ್ನು ಹಾಜರುಪಡಿಸುತ್ತಿದ್ದು **ನಿ.ಪಿ.10 ಮತ್ತು 11** ಎಂದು, |
| 26 ಮೆಡಿಕಲ್ ಬಿಲ್ಲುಗಳನ್ನು ಹಾಜರುಪಡಿಸುತ್ತಿದ್ದು ಅವುಗಳನ್ನು ಒಟ್ಟಾಗಿ **ನಿ.ಪಿ.12** ಎಂದು , |
| 10 ಅಡ್ವಾನ್ಸ್ ಬಿಲ್ಲುಗಳನ್ನು ಹಾಜರುಪಡಿಸುತ್ತಿದ್ದು ಅವುಗಳನ್ನು ಒಟ್ಟಾಗಿ **ನಿ.ಪಿ.13** ಎಂದು , |
| 14 prescriptions ಹಾಜರುಪಡಿಸುತ್ತಿದ್ದು ಅವುಗಳನ್ನು ಒಟ್ಟಾಗಿ **ನಿ.ಪಿ.14** ಎಂದು, |
| 20 ಲ್ಯಾಬ್ ರಿಪೋರ್ಟ್‌ಗಳನ್ನು ಹಾಜರುಪಡಿಸುತ್ತಿದ್ದು ಅವುಗಳನ್ನು ಒಟ್ಟಾಗಿ **ನಿ.ಪಿ.15** ಎಂದು ಗುರುತಿಸಲಾಯಿತು. |
| ಸಿಸಿ ನಂ.10754/2024 ರ ಆದೇಶದ ಪುಟಗಳ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸುತ್ತಿದ್ದು ಅದನ್ನು **ನಿ.ಪಿ.16** ಎಂದು ಗುರುತಿಸಲಾಯಿತು. |

ಅರ್ಜಿಯಲ್ಲಿ ಕೋರಿರುವಂತೆ ಆದೇಶ ಮಾಡಬೇಕೆಂದು ಕೋರುತ್ತೇನೆ.

**ಪಾಟೀ ಸವಾಲು: 1 ನೇ ಎದುರುದಾರರ ಪರ ವಕೀಲರಿಂದ:**

ಅಪಘಾತಕ್ಕು ಮೊದಲು ಕಾಂಕ್ರೀಟ್ ಲಾರಿಯನ್ನು ನಾನು ಸುಮಾರು 30-40 ಅಡಿ ದೂರದಿಂದ ನೋಡಿರುತ್ತೇನೆ. ಅಪಘಾತದ ರಸ್ತೆ ಸ್ಥಳದಲ್ಲಿ ಹೆಚ್ಚಿನ ವಾಹನ ಸಂಚಾರ ಇರುತ್ತದೆ ಎಂದರೆ ಸರಿ. ನನ್ನ ದ್ವಿಚಕ್ರ ವಾಹನದ ಮಿರರ್ ಗೆ ಲಾರಿ ಡಿಕ್ಕಿಪಡಿಸಿತು. ಅಪಘಾತ ಹೇಗೆ ಆಯಿತು ಎಂದರೆ ಸಾಕ್ಷಿಯು ಎದುರುನಿಂದ ಬಂದಂತಹ ಲಾರಿಯು ರಸ್ತೆಯ ಮೇಲ್ಭಾಗದಲ್ಲಿ ಹಾದು ಹೋದಂತಹ ಕೇಬಲ್ ವೈರಿಗೆ ಟಚ್ ಆಗಿ ಕೇಬಲ್ ವೈರು ಕಿತ್ತು ಬಂದಿದ್ದು, ಆ ವೇಳೆಯಲ್ಲಿ

ಕೇವಲ್ ವೈರ್ ನನ್ನ ಕತ್ತು ಹಾಗೂ ನನ್ನ ವಾಹನಕ್ಕೆ ಸುತ್ತಿಕೊಂಡು ನನ್ನನ್ನು ಎಳೆದುಕೊಂಡು ಹೋಗಿ ಅಪಘಾತಪಡಿಸಿತು. ನೀವು ಎದುರಿನಿಂದ ಬಂದಂತಹ ಲಾರಿಯನ್ನು ನೋಡದೆ ತಕ್ಷಣ ರಸ್ತೆಯ ತಿರುವು ತೆಗೆದುಕೊಂಡ ಕಾರಣ ಅಪಘಾತವಾಯಿತು ಎಂದರೆ ಸರಿಯಲ್ಲ. ಲಾರಿ ಚಾಲಕನ ತಪ್ಪಿನಿಂದ ಅಪಘಾತವಾಗಿರುವುದಿಲ್ಲ ಎಂದರೆ ಸರಿಯಲ್ಲ. ಲಾರಿ ಚಾಲಕನಿಗೆ ಕೇಬಲ್ ವೈರ್ ಕಿತ್ತು ಹೋಗಿರುವ ಹಾಗೂ ಕಿತ್ತು ಹೋದಂತಹ ವೈರು ನಿಮಗೆ, ನಿಮ್ಮ ವಾಹನಕ್ಕೆ ಅಪಘಾತಪಡಿಸಿರುವ ವಿಷಯ ಅವರಿಗೆ ತಿಳಿದಿರಲಿಲ್ಲ ಎಂದರೆ ಸರಿಯಲ್ಲ.

**2.** ಅಪಘಾತದಿಂದುಂಟಾದ ಗಾಯಗಳು ಗುಣಮುಖವಾಗಿವೆ ಎಂದರೆ ಸರಿ. ಚಿಕಿತ್ಸೆಗಾಗಿ ಸುಮಾರು 7 ಲಕ್ಷ ರೂ. ಖರ್ಚಾಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಮೆಡಿಕಲ್ ಬಿಲ್ಲುಗಳನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಿ ಎಂದರೆ ಸರಿಯಲ್ಲ. ನಾನು ಆದಾಯ ತೆರಿಗೆ ಪಾವತಿದಾರನಾಗಿರುತ್ತೇನೆ, ಆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಿಮಗೆ ತಿಂಗಳಿಗೆ ಒಂದು ಲಕ್ಷ ವರಮಾನ ಇರಲಿಲ್ಲ ಎಂದರೆ ಸರಿಯಲ್ಲ. ಈಗಲೂ ಸಹ ನೀವು ಮೊದಲಿನಂತೆ ಕೆಲಸ ಮಾಡಬಹುದು ಎಂದರೆ ಸರಿಯಲ್ಲ. ಕೆಲಸ ಮಾಡಬೇಡಿ ಎಂದು ವೈದ್ಯರು ನಿಮಗೆ ಸಲಹೆ ನೀಡಿರುವುದಿಲ್ಲ ಎಂದರೆ ಸರಿ. ನಿಮ್ಮ ಪ್ರಮಾಣ ಪತ್ರಿಕೆಯ 7 ಮತ್ತು 8 ರಲ್ಲಿ ನಮೂದಿಸಿರುವ ನ್ಯೂನ್ಯತೆ ಗಳು ನಿಮಗೆ ಇರುವುದಿಲ್ಲ ಎಂದರೆ ಸರಿಯಲ್ಲ. ಮುಂದಿನ ಚಿಕಿತ್ಸೆಗಾಗಿ ಒಂದು ಲಕ್ಷ ರೂ. ಬೇಕಾಗುತ್ತದೆ ಎಂದು ನಮೂದಿಸಿದ್ದು ಅದಕ್ಕೆ ಸಂಬಂಧಿಸಿದ ಅಂದಾಜು ವೆಚ್ಚ ಪಟ್ಟಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ. ಅಪಘಾತದಿಂದ ನಿಮಗೆ ಯಾವುದೇ ದೈಹಿಕ ಹಾಗೂ ಮಾನಸಿಕ ತೊಂದರೆ ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ತಪ್ಪಿನಿಂದಲೇ ಅಪಘಾತವಾಗಿದ್ದರೂ ಸಹ

ದಾಖಲೆಗಳನ್ನು ಸೃಷ್ಟಿ ಮಾಡಿ ಲಾರಿ ಚಾಲಕನ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**(ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.